## ಇಲ್ಲಿಯವರೆಗೆ



ಚರಿತ್ರೆಯ ಚಕ್ರದ ತಿರುಗಾಟ ಒಂದು ಬಗೆಯಲ್ಲಿ ಭೂಗ್ರಹದ ಚಲನೆಯಂತೆ. ಒಂದು ಪಾರ್ಶ್ವದಲ್ಲಿ ಕತ್ತಲು, ಮತ್ತೊಂದು ಭಾಗದಲ್ಲಿ ಬೆಳಕು. ಶ್ರೀಕೃಷ್ಣದೇವರಾಯನ ಆಳ್ವಿಕೆಯ ಸ್ವರ್ಣಯುಗವನ್ನು ಜಗತ್ತು ಬೆರಗಿನಿಂದ ನೋಡುತ್ತಿರುವಾಗಲೇ, ಇಲ್ಲಿ ಯಾವುದೂ ಶಾಶ್ವತವಲ್ಲ ಎನ್ನುವುದನ್ನು ಮತ್ತೆ ಸಾಬೀತುಪಡಿಸುವಂತೆ ಮಹಾನ್ ಸಾಮ್ರಾಜ್ಯ ಪತನಗೊಂಡಿತು. ತನ್ನ ಬೇರು ಮತ್ತು ಕೊಂಬೆರೆಂಬೆಗಳನ್ನೆಲ್ಲ ಕಣ್ಣು ಕಿವಿಗಳಾಗಿಸಿಕೊಂಡಂತೆ ವರ್ತಮಾನದ ಸಂಗತಿಗಳನ್ನು ಗ್ರಹಿಸತೊಡಗಿದ ಮಹಾವೃಕ್ಷದ ಮಡಿಲು ಪ್ರೇಮಿಗಳ ಪಾಲಿಗೆ ಆಸರೆಯೂ ಆಯಿತು. ಅಲ್ಲಿಂದ ಶುರುವಾದುದು ಕಾಳಿಂಗನ ಕಥೆ. ಮಹಾವೃಕ್ಷದ ಪರಿಸರದಲ್ಲಿ ಕಾಳಿಂಗ ದಂಪತಿ ನಾಗರಿಕ ಜಗತ್ತಿನ ಪಳೆಯುಳಿಕೆಗಳಂತೆ ಬದುಕು ಕಟ್ಟಿಕೊಳ್ಳತೊಡಗಿದರು. ಕಾಡಿಗೂ ನಾಡಿಗೂ ದಾರಿ ಶುರುವಾಯಿತು. ಅದೇ ಕಾಲಕ್ಕೆ ವ್ಯಾಘ್ರವೊಂದರ ಗರ್ಜನೆಯೂ ಕಾಳಿಂಗನಿಗೆ ಕೇಳಿಸತೊಡಗಿತು.

ಮಾತ್ರ ಅರ್ಥವಾಗುತ್ತದೆ, ಹೇಗೆ ಮನುಷ್ಯನ ಮಾತು ಮನುಷ್ಯನಿಗೆ ಅರ್ಥವಾಗುತ್ತದೋ ಹಾಗೆ. ಎಲ್ಲ ಪ್ರಾಣಿಗಳಿಗೂ, ಪಕ್ಷಿಗಳಿಗೂ ಅಷ್ಟೇ ಏಕೆ ಮರಗಿಡಗಳಿಗೂ ಅದರದರದೇ ಆದ ಅಭಿವ್ಯಕ್ತತೆಗಳಿವೆ. ಅದು ಒಂದೊಂದು ಪ್ರಾಣಿಗೂ, ಒಂದೊಂದು ಪಕ್ಷಿಗೂ ಭಿನ್ನವಿರಬಹುದಷ್ಟೇ. ಆದರೆ ಆತಂಕದ, ಅಪಾಯದ ಸಂದರ್ಭಗಳಲ್ಲಿ ಹೊರಹೊಮ್ಮಿಸುವ ಶಬ್ದ ಮಾತ್ರ ಇತರೆ ಪ್ರಾಣಿ ಪಕ್ಷಿಗಳಿಗೂ ಅರ್ಥವಾಗುತ್ತದೆ.

ನಾವು ಮರಗಳೇನಿದ್ದೇವೆ, ನಮಗೂ ನಮ್ಮ ನಮ್ಮ ಜಾತಿಯ ಮರಗಳನ್ನು ಕಂಡರೆ ಅತೀವ ಪ್ರೀತಿ. ಎಷ್ಟೋ ಸಲ ಹತ್ತಿರದಲ್ಲಿದ್ದರೆ ಆಹಾರವನ್ನೂ ನಮ್ಮ ಬೇರುಗಳ ಮೂಲಕ ಹಂಚಿಕೊಳ್ಳುತ್ತೇವೆ. ಬೇರುಗಳು ಬೆರೆಯುವುದಕ್ಕಿಂತಲೂ ದೂರದಲ್ಲಿದ್ದರೆ ಗಾಳಿಯ ಮೂಲಕ ಸಂವಹಿಸಿಕೊಳ್ಳುತ್ತೇವೆ. ಕಾಡಿಗೆ ಬೆಂಕಿ ಬಿದ್ದಿರುವುದರಿಂದ ಹಿಡಿದು ಮರವನ್ನು ತಿನ್ನುವಂಥ ಬೃಹದಾಕಾರದ ಆನೆಗಳು ಬಂದಾಗಲೂ ಪರಸ್ಪರ ವಿಷಯವನ್ನು ಹಂಚಿಕೊಂಡು ಭಯ ವಿಹ್ವಲತೆಯನ್ನು ವ್ಯಕ್ತಪಡಿಸುತ್ತ ಸುಖದುಃಖವನ್ನು ಮಾತಾಡಿಕೊಳ್ಳುತ್ತೇವೆ. ಸಾಧ್ಯವಾದರೆ ಅವುಗಳ ಗಮನವನ್ನು ಬೇರೆಡೆಗೆ ಸೆಳೆದು ನಾವು ಬಚಾವಾಗಲು ನೋಡುತ್ತೇವೆ.

ಅಲ್ಲದೆ ಎಲ್ಲ ಪ್ರಾಣಿಗಳೂ ತಮ್ಮ ತಮ್ಮದೇ ಆದ ಗಡಿಯನ್ನು ಗುರುತಿಸಿಕೊಂಡಿರುತ್ತವೆ. ಹುಲಿ, ಚಿರತೆ, ನಾಯಿಯಂಥ ಕೆಲವು ಪ್ರಾಣಿಗಳು ಮೂತ್ರ ವಿಸರ್ಜಿಸುವ ಮೂಲಕ ತಮ್ಮ ಗಡಿಯನ್ನು ಗುರುತಿಸಿಕೊಂಡರೆ, ಸಿಂಹದಂಥ ಕೆಲವು ಪ್ರಾಣಿಗಳು ತಮ್ಮ ದೇಹವನ್ನು ಮರದ ಬುಡಕ್ಕೋ ಕಲ್ಲಿಗೋ ತಿಕ್ಕಿ ತಿಕ್ಕೀ ತಮ್ಮದೇ ಆದ ವಾಸನೆಯನ್ನು ಹೊರಡಿಸಿ ಗುರುತಿಸಿಕೊಂಡಿರುತ್ತವೆ. ಒಂದರ ಗಡಿಯನ್ನು ಇನ್ನೊಂದು ಸಕಾರಣವಿಲ್ಲದೇ ಅತಿಕ್ರಮಿಸುವುದಿಲ್ಲ. ಒಂದು ವೇಳೆ ಅನಿವಾರ್ಯ ಕಾರಣಕ್ಕೆ ಆಕ್ರಮಿಸುವ ಸಂದರ್ಭ ಬಂದರೆ ಭಯಾನಕವಾದ ಯುದ್ಧವೇ ನಡೆದುಹೋಗುತ್ತದೆ. ಆದರೆ ಮನುಷ್ಯನಂತಲ್ಲ. ಮನುಷ್ಯ ದುರಾಸೆಯಿಂದ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳುತ್ತಲೇ ನಡೆಯುತ್ತಿರುತ್ತಾನೆ.

ನಾನು ಹುಲಿ ವಿಷಯ ಮಾತಾಡುತ್ತಿದ್ದೆನಲ್ಲ. ಹುಲಿಯನ್ನು ಕಂಡರೆ ಅದು ಸಸ್ಯಾಹಾರಿ ಅಲ್ಲವಾದ್ದರಿಂದ ನಮಗೇನೂ ಭಯವಿಲ್ಲದಿರ ಬಹುದು. ಆದರೆ ಅದು ಇತರೆ ಪ್ರಾಣಿಗಳ ಗೋಮಾಳೆಗೆ ಬಾಯಿ ಹಾಕಿ ರಕ್ತವನ್ನು ಹೀರಿ ಕೊಂದು ತಿನ್ನುವುದನ್ನು ನೋಡಲು ನಮಗೂ ಮುಜುಗರ. ಅವೂ ನಮ್ಮಂತೆಯೇ ಜೀವಿಗಳಲ್ಲವೇ. ಈ ಭೂಮಿ ಎಲ್ಲರಿಗೂ ಸೇರಿದ್ದು, ನಿಜ. ಇದರ ಮೇಲೆ ಬದುಕಲು ನಮಗೆಷ್ಟು ಅಧಿಕಾರವಿದೆಯೋ ಆ ಪ್ರಾಣಿಗಳಿಗೂ ಅಷ್ಟೇ ಅಧಿಕಾರವಿರುತ್ತದೆ.

ಜಿಂಕೆಯನ್ನು ಕೊಂದಾದ ಮೇಲೆ ಆ ಹುಲಿಗೆ ಆಕಸ್ಮಿಕವಾಗಿ ಮುಳ್ಳುಹಂದಿಯೊಂದು ಎದುರಾಗಿಬಿಟ್ಟಿತ್ತು. ಆ ಕ್ಷಣದ ಹಸಿವನ್ನು ಮಾತ್ರ ನೀಗಿಸಿಕೊಂಡು ಸುಮ್ಮನಾಗುವ ಹುಲಿ ಆಕಸ್ಮಿಕವಾಗಿ ಸಿಕ್ಕ ಮುಳ್ಳುಹಂದಿಯನ್ನು ಬಲಿಹಾಕಿ ಇಟ್ಟುಕೊಳ್ಳಲು ನಿರ್ಧರಿಸಿಬಿಟ್ಟಿತ್ತು ಎಂದು ಕಾಣುತ್ತದೆ. ಆಗಲೇ ಮುದಿಯಾಗುತ್ತ ಬಂದಿದ್ದ ಆ ಹುಲಿಗೆ ಬೇಟೆಯನ್ನು ಹುಡುಕಿಕೊಂಡು ಹೋಗಿ, ಕೊಂದು ತಿನ್ನುವಷ್ಟು ಶಕ್ತಿ ಇರಲಿಲ್ಲವಾದ್ದರಿಂದ ತಾನಾಗಿಯೇ ಸಿಕ್ಕ ಪ್ರಾಣಿಯನ್ನು ಬೇಟೆಯಾಡಿ ಕಾಯ್ದಿರಿಸಿಕೊಳ್ಳಲು ತೀರ್ಮಾನಿಸಿತ್ತೋ ಏನೋ ಗೊತ್ತಿಲ್ಲ. ಆ ಮುಳ್ಳುಹಂದಿಯೂ ಅಂಥದೇ ಹಠಮಾರಿ ಪ್ರಾಣಿ. ಬೇರೆ ಪ್ರಾಣಿಗಳಂತೆ ಪ್ರಾಣ ಭಯದಿಂದ ಓಡಿಹೋಗದೇ ಸೆಣಸಾಟಕ್ಕೆ ನಿಂತು ಕೊಂಡಿತ್ತು. ಇದು ಅದರ ತಲೆಯ ಕಡೆಯಿಂದ ಆಕ್ರಮಣ ಮಾಡುತ್ತಿದ್ದರೆ ಅದು ತಕ್ಷಣ ಹಿಂದಿರುಗಿ ಕೆದರಿಕೊಂಡ ಮುಳ್ಳುಗಳಿಂದ ಚುಚ್ಚಿಬಿಡುತ್ತಿತ್ತು. ಇದೇ ಅನೇಕ ಬಾರಿ ಪುನರಾವರ್ತನೆಯಾದಾಗ ಹುಲಿಗೂ ಪ್ರತಿಷ್ಠೆಯ ವಿಷಯವಾಗಿ, ಹಂದಿಗೂ ಜೀವನ್ಮರಣದ ಪ್ರಶ್ನೆಯಾಗಿ ಎರಡೂ ಸುಮಾರು ಹೊತ್ತು ಸೆಣಸಾಡಿದ್ದವು. ತಿರುತಿರುಗಿಸಿ ಹುಲಿ ಯನ್ನು ಸುಸ್ತುಗೆಡವಿತು ಹಾವನ್ನು ಮುಂಗುಸಿ ಸುಸ್ತುಗೆಡವುತ್ತದಲ್ಲ ಹಾಗೆ. ಹುಲಿಯಂಥ ಹುಲಿಗೆ ಬೇಟೆಯನ್ನು ಸುಮ್ಮನೆ ಬಿಟ್ಟುಬಿಡುವುದು ಅವಮಾನಕರವಾಗಿ ಕಂಡುದರಿಂದಲೋ ಏನೋ ಗಬಕ್ಕನೆ ಬಾಯಿ ಹಾಕಿದ ರಭಸಕ್ಕೆ ತಿರುಗಿಕೊಂಡ ಮುಳ್ಳುಹಂದಿಯ ಮುಳ್ಳುಗಳೆಲ್ಲ ಬಾಯಿ, ಮುಖ, ಕಣ್ಣಿಗೆಲ್ಲ ಚುಚ್ಚಿಕೊಂಡುಬಿಟ್ಟವು. ಚುಚ್ಚಿಕೊಂಡದ್ದು ಅಷ್ಟೇ ಅಲ್ಲ, ಮುಖ ಬಾಯಿಯಲ್ಲಿ ನೆಟ್ಟುಕೊಂಡ ಅನೇಕ ಮುಳ್ಳುಗಳನ್ನು ಬಿಡಿಸಿಕೊಳ್ಳಲು ಸಾಧ್ಯವಾಗದೇ ಆರ್ತನಾದ ಮಾಡುತ್ತ ಅರೆ ಕುರುಡಾದ ಕಣ್ಣಿನಲ್ಲೇ ತನ್ನ ಗಡಿಯನ್ನು ದಾಟಿ ಬಂದುಬಿಟ್ಟಿತ್ತು. ಸುಲಭವಾಗಿ ಸಿಗುವ ಪ್ರಾಣಿಗಳನ್ನು ಅದು ಹುಡುಕಿಬಂದಿದ್ದರೂ ಕಣ್ಣು ಬಾಯಿಗಳು ಅದರ ಮಾತು ಕೇಳುವಂತಿರಲಿಲ್ಲವಾದ್ದರಿಂದ ನನ್ನ ಕಟ್ಟೆಯ ಮೇಲೆ ಕೆಲಕಾಲ ಕುಳಿತು ತನ್ನ ಪಂಜಿನಿಂದ ಮುಖ ನಾಲಿಗೆಯನ್ನು ಗೆಬರಿ ಗೆಬರೀ ಮುಳ್ಳುಗಳನ್ನು ಕಿತ್ತುಕೊಳ್ಳಲು ಪ್ರಯತ್ನಿಸುತ್ತಿತ್ತು.

ಮೆಲ್ಲಗೆ ಅಲ್ಲಿಂದ ಹೊರಟ ಹುಲಿ ಎರಡು ಮೂರು ಮೈಲಿ ನಡೆದು ಬೆಳಕು ಹರಿಯುವ ಹೊತ್ತಿಗೆ ಬಯಲು ಬಸವಣ್ಣನ ಆಸುಪಾಸಿನ ಕರಿಕಲ್ಲು ಗುಡ್ಡೆಯ ಮೇಲೆ ಮಲಗಿಬಿಟ್ಟಿತ್ತು.

ಹೊಟ್ಟೆಬಾಕ ಪುಣ್ಯಕೋಟಿ ಹಸುವು ಹೆಚ್ಚು ಮೇಯ್ದು ತನ್ನ ಕರುವಿಗೆ ಜಾಸ್ತಿ ಹಾಲನ್ನು ಕೊಡಬೇಕೆಂಬ ದುರಾಸೆಯಿಂದ ಕಾಳ ಮತ್ತು ಕಾಳಿಂಗನ ಕಣ್ಣು ತಪ್ಪಿಸಿ ಅದೇ ಬಂಡೆಯವರೆಗೂ ಹೋಗಿಬಿಟ್ಟಿತ್ತು. ನಿಶ್ಚಲವಾಗಿ ಮಲಗಿದ್ದ ಹುಲಿಯ ಘರ್ಜನೆ ಕೇಳದಿದ್ದರಿಂದ ನಿನ್ನೆ ರಾತ್ರಿಯ ಭಯ ಅದಕ್ಕಿರಲಿಲ್ಲ. ಇದರ ಕೊರಳಲ್ಲಿದ್ದ ಗಂಟೆಯ ನಿನಾದದಿಂದ ಎಚ್ಚರಗೊಂಡ ನಿತ್ರಾಣಗೊಂಡಿದ್ದ ಹುಲಿ, ತನ್ನ ಹಸಿವಿನ ಸಮಯಕ್ಕೆ ತಾನಾಗಿಯೇ ಒಲಿದುಬಂದ ಹಸುವಿನ ಮಾಂಸವನ್ನು ಬಿಟ್ಟುಬಿಡುವಷ್ಟು ಮೂರ್ಖ ನಾಗಿರಲಿಲ್ಲವಾದ್ದರಿಂದ, ಬಾಯಿಯಿಂದ ಅದರ ಗೋಮಾಳೆಯ ರಕ್ತವನ್ನು ಹೀರಲು ಸಾಧ್ಯವಾಗದೇ ಇದ್ದರೂ ಕನಿಷ್ಠ ಪಂಜಿನಿಂದ ಹೊಡೆದು ಸಾಯಿಸೋಣವೆಂದು ಕರಿಕಲ್ಲುಗುಡ್ಡದ ಮೇಲಿನಿಂದೆರಗಿತು. ಆದರೆ ನಿಶ್ಶಕ್ತಿಯಿಂದ ಪುಣ್ಯಕೋಟಿಯನ್ನು ತಲುಪುವ ಮೊದಲೇ ನೆಲಕ್ಕೆ ಮುಗ್ಗರಿಸಿಬಿದ್ದು, ನಂಜೇರಿದ್ದ ಮುಳ್ಳುಹಂದಿಯ ಮುಳ್ಳಿನ ವಿಷಕ್ಕೂ, ಬಿದ್ದ ಪೆಟ್ಟಿನ ನೋವಿಗೂ ತತ್ತರಿಸಿ ಪ್ರಾಣಬಿಟ್ಟಿತು.

ರಾತ್ರಿ ಕಟ್ಟಿಹಾಕದುದರಿಂದ ಸುಮ್ಮನೇ ಮಲಗು ವುದನ್ನು ಬಿಟ್ಟು ಮತ್ತೆ ಎಲ್ಲೋ ಮೇವಿನ ಸಂಚಾರಕ್ಕೆ ಹೊರಟುಬಿಟ್ಟದ್ದು, ಬೆಳಕು ಹರಿಯುತ್ತಿದ್ದಂತೆಯೇ ಕರುವಿನ ನೆನಪಾಗಿ ಓಡೋಡಿಬಂದಿತು. ಅದನ್ನು ಕಂಡ ಕಾಳಿಂಗನಿಗೆ ಈ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವುದೇ ಸಾಧ್ಯವಾಗಿರಲಿಲ್ಲ.

ಅವತ್ತು ಬೆಳಗ್ಗೆ ಮತ್ತೆ ಕಾಳಿಂಗನೇ ಹಸು ಗಳನ್ನೆಲ್ಲ ಕಾಡಿಗೆ ಹೊಡೆದುಕೊಂಡು ಹೊರಟ. ನಿನ್ನೆಯಂತೆ ಇವತ್ತು ಹುಲಿಯ ಆರ್ಭಟ ಕೇಳದುದರಿಂದ, ತನ್ನ ಪಾಡಿಗೆ ತಾನು ಎಲ್ಲೋ ಮುಂದೆ ಹೊರಟುಹೋಗಿದೆಯೆಂದು ಭಾವಿಸಿ ಇನ್ನೊಂದು ಮೈಲಿಯಷ್ಟು ಮುಂದಕ್ಕೆ ಅವುಗಳನ್ನು ಮೇಯಿಸಲು ಹೊಡೆದುಕೊಂಡು ಹೋದ.